# ನಿರ್ದೇಶನದತ್ತ ಕನ್ನಡತಿ



**ಕಿರುತೆರೆ, ಬೆಳ್ಳಿತೆರೆಯಲ್ಲಿ ತಮ್ಮ ನಟನೆಯಿಂದ ಜನಮೆಚ್ಚುಗೆ ಗಳಿಸಿರುವ 'ಕನ್ನಡತಿ' ಖ್ಯಾತಿಯ ನಟಿ ರಂಜನಿ ರಾಘವನ್, ಕಥೆಗಾರ್ತಿಯಾಗಿಯೂ ಗುರುತಿಸಿಕೊಂಡವರು. ಇದೀಗ ನಿರ್ದೇಶನದತ್ತ ತಮ್ಮ ಹಾದಿ ಹೊರಳಿಸಿದ್ದು, ಹೊಸ ಅನುಭವಗಳ ಕುರಿತು 'ಸುಧಾ' ಜೊತೆ ಮಾತನಾಡಿದ್ದಾರೆ.**

**■ ಸುಮಲತಾ ಎನ್**

◆ **ಸಿನಿಮಾ ನಿರ್ದೇಶನದ ಕನಸು ಚಿಗುರಿದ್ದು ಯಾವಾಗ?**

ನನ್ನಲ್ಲಿ ಚಿಕ್ಕ ವಯಸ್ಸಿನಿಂದಲೂ ನಾಯಕತ್ವ ಗುಣ ಇತ್ತು. ಇದು ನನ್ನನ್ನು ತುಂಬಾ ಪ್ಯಾಷನೇಟ್ ಮಾಡಿದಂಥ ವಿಷಯ. ಶಾಲಾ ಕಾಲೇಜು ದಿನಗಳಲ್ಲಿ ಲೀಡರ್ ಆಗಿರುತ್ತಿದ್ದೆ. ಈ ಕ್ಷೇತ್ರಕ್ಕೆ ಬಂದಾಗ, ನನಗೆ ನಿರ್ದೇಶಕನೇ ಲೀಡರ್ ಎಂಬುದು ಗೊತ್ತಾಯಿತು. ಆಗಿನಿಂದಲೂ ಆ ಒಂದು ಪ್ರೊಫೆಷನ್ ಮೇಲೆ ಬಹಳ ಗೌರವ, ಆಸಕ್ತಿ ಬೆಳೆಯಿತು. ನನಗೆ ಕಥೆಗಳೆಂದರೆ ಮೊದಲಿನಿಂದಲೂ ಇಷ್ಟವಿತ್ತು. ಈ ಎರಡೂ ಸಮ್ಮಿಲನವಾಗಿ 'ನಿರ್ದೇಶನ'ದತ್ತ ಮನಸ್ಸು ವಾಲಿತು. ಮೊದಲನೇ ಸಲ ಬಣ್ಣ ಹಾಕಿದ್ದಾಗಿನಿಂದಲೂ ನಿರ್ದೇಶನದ ಬಗ್ಗೆ ಪ್ರೀತಿ ಹುಟ್ಟಿತ್ತು.

ಹೀಗಾಗೇ, ಅದಕ್ಕೆ ಏನೇನು ತಯಾರಿ ಬೇಕೋ ಅವೆಲ್ಲ ಮನಸ್ಸಿನಲ್ಲಿ ನಡೆಯುತ್ತಲೇ ಬಂತು. ನಾನು ನಟಿಯಾಗಿದ್ದಾಗಲೂ ಆ ಆಸಕ್ತಿ ನನ್ನೊಳಗೆ ಕೆಲಸ ಮಾಡುತ್ತಲೇ ಇತ್ತು.

ನಿರ್ದೇಶನಕ್ಕೆ ಮೊದಲು ಅವಶ್ಯಕವಿರುವುದು ಬರವಣಿಗೆ ಎನಿಸಿತು. ಬರವಣಿಗೆಯತ್ತ ಮನಸ್ಸು ನೀಡಿದೆ. ಘೋಸ್ಟ್ ರೈಟರ್ ಆಗಿ ಕೆಲಸ ಮಾಡಿದ್ದೆ. 'ಇಷ್ಟದೇವತೆ' ಎಂಬ ಧಾರಾವಾಹಿ ನಿರ್ದೇಶನವನ್ನೂ ಮಾಡಿದ್ದೆ. ಯೋಗರಾಜ್ ಭಟ್ ಹಾಗೂ ಕನ್ನಡದ ಪ್ರಮುಖ ನಿರ್ದೇಶಕರ ಸಿನಿಮಾಗಳಲ್ಲಿನ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದೆ. ಮೂರ್ನಾಲ್ಕು ವರ್ಷಗಳಿಂದ ಹಲವು ಕಥೆಗಳನ್ನಿಟ್ಟುಕೊಂಡು ಸಿನಿಮಾ ಮಾಡಬೇಕು ಎಂದುಕೊಳ್ಳುತ್ತಿದ್ದೆ. ಈಗ ಸಿನಿಮಾ ನಿರ್ದೇಶನ ಆರಂಭವಾಗಿದೆ.

◆ **ನಿಮ್ಮ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಸಿನಿಮಾ ಕುರಿತು...**

ಈ ಸಿನಿಮಾ ಫ್ಯಾಮಿಲಿ ಸೋಷಿಯೋ ಡ್ರಾಮಾ. ಸಮಕಾಲೀನ ಸಮಾಜದಲ್ಲಿರುವಂಥ ಮುಖ್ಯವಾದ ಸಮಸ್ಯೆ ಬಗ್ಗೆ ಕಥೆ ಮಾತನಾಡುತ್ತದೆ. ಚಿತ್ರೀಕರಣ ಶುರುವಾಗಿದೆ. ಇನ್ನಷ್ಟು ಮಾಹಿತಿ ಸ್ವಲ್ಪ ದಿನಗಳಲ್ಲಿ ಘೋಷಣೆಯಾಗಲಿದೆ.

◆ **ನಿರ್ದೇಶಕಿಯಾಗಿ ಅನುಭವ ಹೇಗಿದೆ?**

ಸುಲಭವಾಗಿಯಂತೂ ಇಲ್ಲ. ಕೆಲವೊಮ್ಮೆ ಮರಗಟ್ಟಿಸುವಂತಾಗುತ್ತದೆ. ಯಾವ ಭಾವನೆಯನ್ನೂ ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಾಗುವುದಿಲ್ಲ. ಒಂದು ಕ್ಷಣ ಖುಷಿಯಿದ್ದರೆ, ಮರುಕ್ಷಣ ಭಯ ಆಗುತ್ತದೆ. ನಿರಂತರ ಬದಲಾಗುತ್ತಿರುತ್ತದೆ. ಒಂದು ಕೆಲಸ ಮುಗೀತು ಎಂದ ತಕ್ಷಣ ಇನ್ನೊಂದು ಕೆಲಸ ನೆನಪಾಗುತ್ತದೆ. ಆ ಕೆಲಸ ಮುಗಿದ ಸಂತೋಷವನ್ನೂ ಅನುಭವಿಸಲು ಸಾಧ್ಯವಾಗುವುದಿಲ್ಲ. ಆದರೆ ಈ ಎಲ್ಲಾ ಒದ್ದಾಟಗಳಲ್ಲೂ ಒಂದು ಖುಷಿಯಿದೆ.

◆ **ನಿರ್ದೇಶನದಲ್ಲಿ ಎದುರಾಗುತ್ತಿರುವ ಸವಾಲುಗಳು?**

'ಮೊದಲ ಸಲ' ಎನ್ನುವುದೇ ಸವಾಲು. ಪ್ರತಿಯೊಂದೂ ಹೊಸತು. ಪ್ರತಿಯೊಂದೂ ನನಗೆ ಗೊತ್ತೋ ಗೊತ್ತಿಲ್ಲವೋ ಗೊಂದಲ ಅನ್ನಿಸುತ್ತದೆ. ಒಮ್ಮೆ ಆತ್ಮವಿಶ್ವಾಸ ಬರುತ್ತದೆ, ಮತ್ತೊಮ್ಮೆ ಭಯ ಆಗುತ್ತದೆ. ಇನ್ನೊಬ್ಬರನ್ನು ನೋಡೋದು, ಅವರಿಂದ